ಮೋಹನ ಕುಂಟಾರ್

# ಕನ್ನಡ ಕೃತಿಗಳಿಗೆ ಮಲಯಾಳಂನಲ್ಲಿ ಬೇಡಿಕೆಯಿಲ್ಲ

1 ನೀವು ಹೆಸರಿಸಿದ ಈ ಎಲ್ಲಾ ಕೃತಿಗಳ ಅನುವಾದಕರು ಕೇವಲ ಅನುವಾದಕರಲ್ಲ. ಅವರೆಲ್ಲ ಕನ್ನಡದ ಆಯಾ ಪ್ರಕಾರದ ಬಹುಮುಖ್ಯ ಲೇಖಕರೇ ಆಗಿದ್ದಾರೆ. ಅನುವಾದದ ಪ್ರಯತ್ನಗಳು ಸೃಜನಶೀಲ ಮನಸ್ಸುಗಳಿಂದ ಆದಾಗ ಉತ್ತಮ ಅನುವಾದಗಳು ರೂಪುಗೊಂಡಿವೆ ಎಂಬುದನ್ನು ಈ ಕೃತಿಗಳು ಸಾಬೀತುಪಡಿಸುತ್ತಿವೆ.

2 ಕುವೆಂಪು ಭಾಷಾ ಭಾರತಿ ತನ್ನದೇ ಇತಿಮಿತಿಯಲ್ಲಿ ಅನುವಾದ ಕೃತಿಗಳನ್ನು ಪ್ರಕಟಿಸುವ ಉತ್ತಮ ಕೆಲಸ ಮಾಡಿದೆ. 'ಸಾಂಸ್ಕೃತಿಕ ವಿನಿಮಯ'ದ ದೃಷ್ಟಿಯಿಂದ ಕುವೆಂಪು ಭಾಷಾ ಭಾರತಿಯ ಕೊಡುಗೆ ಗಮನಾರ್ಹವಾದುದು. ಪ್ರಕಟಣೆಗಳಲ್ಲಿ ಒಳ್ಳೆಯ ಗುಣಮಟ್ಟದ ಅನೇಕ ಕೃತಿಗಳೂ ಇವೆ. ಒಳ್ಳೆಯ ತಂಡ ದೊರೆತರೆ ಅನುವಾದ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಲು ಇಂತಹ ಸಂಸ್ಥೆಗಳಿಂದ ಸಾಧ್ಯವಿದೆ.

ಅನುವಾದ ಸಂವಾದ

3 ಸಮಕಾಲೀನ ಓದುಗರಿಗೆ ಸುಲಭವಾಗಿ ಸಂವಹನವಾಗುವಂತೆ ರೂಪುಗೊಂಡಿರುವುದೇ ಉತ್ತಮ ಅನುವಾದ. ಉತ್ತಮ ಅನುವಾದದಲ್ಲಿ ಸೃಜನಶೀಲಗುಣ ಇರಬೇಕಾಗುತ್ತದೆ. ಉದಾಹರಣೆಗಾಗಿ ವಿ.ಎಂ. ಇನಾಂದಾರರ 'ಯಯಾತಿ' ಕಾದಂಬರಿ ಅನುವಾದವನ್ನು ಹೆಸರಿಸಬಹುದು.

ಆಯಾ ಕಾಲಕ್ಕೆ ಬೇಕಾದ ಅನುವಾದಗಳನ್ನು ಮಾಡುವ, ಹಾಗೆಯೇ ಓದುವ ಸ್ವಾತಂತ್ರ್ಯ ಓದುಗರಿಗೆ ಇದ್ದೇ ಇದೆ. ಹಾಗಾಗಿ ಅನುವಾದಗಳು ಸಾರ್ವಕಾಲಿಕವಾಗಿ ಉಳಿಯಲಾರವು. ಕನ್ನಡದಲ್ಲಿ ಒಂದೇ ಕೃತಿಯ ಹಲವು ಅನುವಾದಗಳು ಕಾಲಾಂತರದಲ್ಲಿ ಮತ್ತೆ ಮತ್ತೆ ಪ್ರಕಟವಾದ ನಿದರ್ಶನಗಳು ಧಾರಾಳ ಇವೆ.

4 ಅನುವಾದ ಮೂಲ ಕೃತಿಯನ್ನು ನಮ್ಮದಾಗಿ ಮಾಡಿಕೊಳ್ಳುವ ತುರ್ತಿನಲ್ಲಿ ಹುಟ್ಟುತ್ತದೆ. ಸರಿ. ನಮ್ಮದನ್ನಾಗಿ ಮಾಡಿಕೊಳ್ಳುವಲ್ಲಿ ಎರಡು ಬಗೆಯ ಪ್ರಕ್ರಿಯೆಗಳು ಕನ್ನಡದಲ್ಲಿವೆ. ಮೊದಲನೆಯದು ಮೂಲಕೃತಿಯನ್ನು ಅನುಸೃಷ್ಟಿಸುವ ಕ್ರಮ, ಎರಡನೆಯದು ಮೂಲ ಕೃತಿಯನ್ನು ಯಥಾವತ್ತಾಗಿ ಅನುವಾದ ಮಾಡುವ ಕ್ರಮ. ಕನ್ನಡದಲ್ಲಿ ಅನುಸೃಷ್ಟಿ ಪರಂಪರೆಗೆ ಇರುವ ಪ್ರಾಶಸ್ತ್ಯ ಅನುವಾದ ಪರಂಪರೆಗೆ ಇಲ್ಲ. ಪಂಪನ 'ವಿಕ್ರಮಾರ್ಜುನವಿಜಯ'ವನ್ನು ಓದುವುದು ಮೂಲ ವ್ಯಾಸನ ಕೃತಿಯನ್ನು ತಿಳಿದುಕೊಳ್ಳುವುದಕ್ಕಲ್ಲ. ಪಂಪನ ಅನುಸೃಷ್ಟಿಯ ಸೊಗಸನ್ನು, ಸೃಜನಶೀಲತೆಯನ್ನು ಕೊಂಡಾಡುವುದು ನಮ್ಮ ದೃಷ್ಟಿ. ಆ ಕಾರಣಕ್ಕಾಗಿಯೇ ನಾಗವರ್ಮನ 'ಕರ್ಣಾಟಕ ಕಾದಂಬರಿ',